



ಅರುಣ ಪಿ. ಭಟ್ಟ

## ವಾರಭವಿಷ್ಯ 18.6.2020ರಿಂದ 24.6.2020ರವರೆಗೆ




ಕುಟುಂಬದ ಬಗ್ಗೆ ಹೆಮ್ಮೆ ಪಡುವಂಥ ಬೆಳವಣಿಗೆ ಆಗುತ್ತದೆ. ವಾರದ ಶುರುವಿನಿಂದಲೇ ಉತ್ಸಾಹದಿಂದ ಕಾಣಿಸಿಕೊಳ್ಳುತ್ತೀರಿ. ನಿಮ್ಮ ವೈಯಕ್ತಿಕ ಶ್ರಮದಿಂದ ಹೆಚ್ಚಿನ ಯಶಸ್ಸು. ನಿಮ್ಮ ಸಹೋದ್ಯೋಗಿಗಳ ಜತೆಗೆ ಇರುವ ಭಿನ್ನಾಭಿಪ್ರಾಯಗಳನ್ನು ಮರೆಯಲು ಪ್ರಯತ್ನ ಮಾಡುತ್ತೀರಿ. ಶುಭದಿನ 18. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಶುಭ ಕಾರ್ಯ ಆಯೋಜನೆ ಸಾಧ್ಯತೆ. ವಾರದ ಮೊದಲಾರ್ಧ ಗ್ರಹಗತಿಗಳು ಅನುಕೂಲಕರ. ಈ ಅವಧಿಯಲ್ಲಿ ಅತಿ ಮುಖ್ಯವಾದ ಕೆಲಸಗಳನ್ನು ಮಾಡಿ. ವ್ಯವಹಾರ, ಒಪ್ಪಂದ, ಭೇಟಿ ಇತ್ಯಾದಿ ಕೆಲಸಗಳಲ್ಲಿ ಯಶಸ್ಸು ಕಾಣಬಹುದು. ಉದ್ಯೋಗ ಸ್ಥಳದಲ್ಲಿ ನಿಮ್ಮ ಗೌರವ, ವರ್ಚಸ್ಸು ಹೆಚ್ಚುವ ಸಾಧ್ಯತೆ ಇದೆ. ಕೌಟುಂಬಿಕವಾಗಿ ಬಹಳ ನೆಮ್ಮದಿಯಾಗಿ ಇರುತ್ತೀರಿ. ಶುಭದಿನ 19. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಾಣುವುದು. ಆಕಸ್ಮಿಕ ಅಧಿಕ ಖರ್ಚು ಸಂಭವ. ಆಸ್ತಿ ಖರೀದಿ ಬಗ್ಗೆ ಚಿಂತನೆ ನಡೆಸುವಿರಿ. ಸಂಘ ಸಂಸ್ಥೆಗಳಿಂದ ಧನಲಾಭ ಸಾಧ್ಯತೆ. ನಿಮ್ಮ ಶತ್ರುಗಳು ಹಿಂದೆ ಸರಿಯುವರು. ವೃತ್ತಿ ವ್ಯವಹಾರದಲ್ಲಿ ಲಾಭ. ಸರಕಾರಿ ಕೆಲಸ ಆಗುವುದು. ಶುಭದಿನ 21. ಚಂಡಿ ಪಾರಾಯಣ ಮಾಡಿರಿ.




ನವೋಲ್ಲಾಸ ಬರುವುದು. ಧರ್ಮ ದಾನಕ್ಕಾಗಿ ಖರ್ಚು. ಮಿತ್ರರಿಗೆ ಸಹಾಯ. ವ್ಯಾಪಾರದಲ್ಲಿ ಅಧಿಕ ಲಾಭ ಹಳೆಯ ಮಿತ್ರರ ಆಗಮನ. ಹಲವು ದಿನಗಳ ಸಮಸ್ಯೆ ಬಗೆಹರೆಯುವುದು. ಹೊಟ್ಟೆನೋವಿನ ಕಾಟ. ಮನೆಯಲ್ಲಿ ಸಂಭ್ರಮ.ಮಕ್ಕಳಿಂದ ಶುಭವಾರ್ತೆ.ಮಹತ್ವದ ಕಾಗದ ಪತ್ರಗಳ ರಕ್ಷಣೆ. ಸಹೋದರರ ಸಹಾಯ. ಶುಭದಿನ 20. ಶಿವ ಕವಚ ಓದಿರಿ.




ಕುಟುಂಬದವರ ಜತೆಗೆ ಹೆಚ್ಚಿನ ಸಮಯ ಕಳೆಯುವ ಸಾಧ್ಯತೆ. ಈ ಹಿಂದೆಂದಿಗಿಂತಲೂ ಈ ವಾರ ಹೆಚ್ಚು ಚಟುವಟಿಕೆಯಿಂದ ಇರಬೇಕಾಗುತ್ತದೆ. ಭೂ ವ್ಯಾಜ್ಯಕ್ಕೆ ಶ್ರಮ ಹಾಕಲಿದ್ದೀರಿ. ಕಾನೂನಿಗೆ ಸಂಬಂಧಿಸಿದ ವಿಚಾರಗಳಲ್ಲಿ ತೊಡಗಿಕೊಳ್ಳುತ್ತೀರಿ. ನೀವು ಪ್ರತಿನಿಧಿಸುವ ಸಂಸ್ಥೆಯ ಸಾಮರ್ಥ್ಯ ಹೆಚ್ಚಿಸುವ ನಿಟ್ಟಿನಲ್ಲಿ ಕೆಲವು ಸೂತ್ರಗಳನ್ನು ರೂಪಿಸಲಿದ್ದೀರಿ. ಶುಭದಿನ 22. ಸೌಂದರ್ಯಲಹರಿ ಪಠಿಸಿರಿ.




ಎಂಜಿನಿಯರಿಂಗ್ ಕ್ಷೇತ್ರದವರಿಗೆ ಈ ಹಿಂದೆಂದಿಗಿಂತ ಹೆಚ್ಚಿನ ಅವಕಾಶಗಳು ಬರುತ್ತವೆ. ನಿಮ್ಮಲ್ಲಿ ಆಗುತ್ತಿರುವ ಸಕಾರಾತ್ಮಕ ಪರಿಣಾಮ ಅನುಭವಕ್ಕೆ ಬರುತ್ತದೆ. ಒಟ್ಟಾರೆ ಕುಟುಂಬದೊಳಗೆ ಸಂತಸದ ವಾತಾವರಣ ಇರುತ್ತದೆ. ಈವರೆಗಿನ ನಿಮ್ಮ ಆದಾಯ ಹೆಚ್ಚಾಗಲಿದೆ. ಶುಭದಿನ 23. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಈ ವಾರ ಬದುಕಿನಲ್ಲಿ ಲಾಭ ಹಾಗೂ ಮಹತ್ತರವಾದ ಪ್ರಗತಿ ಕಾಣುವ ಯೋಗ ಇದೆ. ಮನೆಗೆ ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ ಮಾಡಲಿದ್ದೀರಿ. ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುವವರಿಗೆ ಪ್ರತಿಭೆಯನ್ನು ಪ್ರದರ್ಶಿಸಲು ಅತ್ಯುತ್ತಮ ಅವಕಾಶಗಳಿವೆ. ಶೈಕ್ಷಣಿಕ ಅರ್ಹತೆ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತೀರಿ. ಆರೋಗ್ಯವು ಚೆನ್ನಾಗಿರುತ್ತದೆ. ಶುಭದಿನ 21. ದೇವ್ಯಪರಾಧ ಕ್ಷಮಾಪನಾ ಸ್ತೋತ್ರ ಪಠಿಸಿರಿ.




ಬಹಳ ಮುಖ್ಯವಾದ ಕಾರ್ಯಕ್ಕೆ ಸಿದ್ಧರಾಗುತ್ತೀರಿ. ಕೆಲವು ವಿಚಾರಗಳು ಕಣ್ತಪ್ಪಿನಿಂದ ಬಿಟ್ಟು ಹೋಗುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ತಾಳ್ಮೆ ಮತ್ತು ಧೈರ್ಯ ಬಹಳ ಮುಖ್ಯವಾಗುತ್ತದೆ. ವಾರದ ಮಧ್ಯ ಭಾಗದಲ್ಲಿ ವ್ಯಾಪಾರ ವ್ಯವಹಾರಗಳ ವಿಸ್ತರಣೆಗೆ ಶ್ರಮ ಹಾಕುತ್ತೀರಿ. ಶುಭದಿನ 22. ಶ್ರೀ ದುರ್ಗಾಪಾರಾಯಣ ಮಾಡಿರಿ.




ಆಸ್ತಿ ಖರೀದಿಗೆ ಪ್ರಯತ್ನಿಸುತ್ತಿರುವವರು ಪರಿಶೀಲನೆ ನಡೆಸಲಿದ್ದೀರಿ. ಪ್ರಮಾದ ತಡೆಯುವ ಸನ್ನಿವೇಶ ನಿಮಗೆ ಪೂರಕ ಆಗಲಿದೆ. ಆದರೆ ಈ ಸಮಯದಲ್ಲಿ ಆರೋಗ್ಯ ಸ್ಥಿತಿ ಪೂರಕವಿರುವುದಿಲ್ಲ. ವೈಯಕ್ತಿಕ ಸಂಬಂಧದಲ್ಲಿ ಕೆಲವು ಕಹಿ ಬೆಳವಣಿಗೆಗಳು ಆಗಲಿವೆ. ವಾರದ ಅಂತ್ಯಕ್ಕೆ ಕುಟುಂಬದವರ ಬೆಂಬಲ. ಸೋದರ ಸೋದರಿಯರ ಜತೆಗೆ ಬಾಂಧವ್ಯ ಗಟ್ಟಿಯಾಗುತ್ತದೆ. ಶುಭದಿನ 19. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ವಾರದ ಶುರುವಿನಲ್ಲೇ ವ್ಯಾಪಾರ ಉದ್ಯಮದಲ್ಲಿ ಪ್ರಗತಿ ಕಾಣಿಸುತ್ತದೆ. ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಮಹತ್ವದ ಒಪ್ಪಂದವೊಂದಕ್ಕೆ ಸಹಿ ಹಾಕುವ ಸಾಧ್ಯತೆಗಳಿವೆ. ಒತ್ತಡದ ಕೆಲಸ ಇದ್ದರೂ ಆರಾಮವಾಗಿ ಪೂರೈಸಲು ನಿಮ್ಮಿಂದ ಸಾಧ್ಯವಾಗಲಿದೆ. ಮುಖ್ಯವಾದ ಕೆಲಸ ಕಾರ್ಯ ಮುಂದೂಡುವುದು ಒಳ್ಳೆಯದು. ಶುಭದಿನ 19. ಕಾಲಭೈರವನ ಸೇವೆ ಮಾಡಿರಿ.




ವಾರದ ಶುರುವಿನಲ್ಲಿ ನಿಮ್ಮ ಬಳಿ ಇರುವ ಹಣದ ಸದುಪಯೋಗ ಮಾಡಿಕೊಳ್ಳುವ ಬಗ್ಗೆ ಯೋಜನೆ ರೂಪಿಸಲಿದ್ದೀರಿ. ನೀವು ಹಾಕಿಕೊಂಡ ಗುರಿಯನ್ನು ಅಂದುಕೊಂಡ ಸಮಯಕ್ಕಿಂತ ಮುಂಚಿತವಾಗಿಯೇ ತಲುಪುವ ಎಲ್ಲ ಸಾಧ್ಯತೆಗಳಿವೆ. ಪ್ರೀತಿ ಪ್ರೇಮದಲ್ಲಿ ಇರುವವರು ಸಂಗಾತಿಯ ಭಾವನೆಗಳಿಗೆ ಗೌರವ ನೀಡುತ್ತೀರಿ. ಶುಭದಿನ 18. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಈ ಅವಧಿಯಲ್ಲಿ ದೇವತಾ ಆರಾಧನೆಗೆ ನಿಮ್ಮ ಶ್ರಮ ಹಾಕುತ್ತೀರಿ. ಕೆಮ್ಮು ನೆಗಡಿ ಕಾಡಬಹುದು. ತಂದೆಯ ಸಮಾನರಾದವರಿಗೆ ಅನಾರೋಗ್ಯ ಕಾಡಬಹುದು. ಈ ವಾರ ಆದಾಯ ಅನುಕೂಲಕರವಾಗಿ ಇರಲಿದೆ. ವಾರದ ಮಧ್ಯ ಭಾಗದಲ್ಲಿ ವೃತ್ತಿಪರ ಜೀವನದಲ್ಲಿ ಅತ್ಯುತ್ತಮವಾದ ಬೆಳವಣಿಗೆ ಇದೆ. ಶುಭದಿನ 23. ಕನಕಧಾರಾ ಸ್ತೋತ್ರ ಪಠಣಮಾಡಿರಿ.